**Com.O.S.** 50/2022
**PW**–1

**ಸಾಕ್ಷಿಯನ್ನು ದಿನಾಂಕ 11.2.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎನ್.ಸಿ ವಕೀಲರಿಂದಃ**

1 ರಿಂದ 4 ನೇ ಪ್ರತಿವಾದಿಗಳು ಸಾಲ ಕೋರಿ ಅರ್ಜಿ ಸಲ್ಲಿಸಿದ್ದರು. ನಿಪಿ1 ರಲ್ಲಿ ಎಲ್ಲ ಪ್ರತಿವಾದಿಗಳ ಸಹಿ ಇದೆ. ಆದರೆ ಅರ್ಜಿದಾರ ಎನ್ನುವಲ್ಲಿ ಕಮಲಮ್ಮ ನವರ ಸಹಿ ಮಾತ್ರ ಇದೆ. ಉಳಿದ ಪ್ರತಿವಾದಿಗಳು ಅರ್ಜಿದಾರರಾಗಿ ಸಹಿ ಮಾಡಿಲ್ಲ, ಆದರೆ ಕೋ ಅಬ್ಲಿಂಗೆಂಟ್ ಆಗಿ ಸಹಿ ಮಾಡಿದ್ದಾರೆ. ಪ್ರತಿವಾದಿಗಳಿಗೆ ಹಣ ಪಾವತಿ ಮಾಡಿದಾಗ ಯಾರು ಯಾರಿದ್ದರು ಎಂದು ಈಗ ನೆನಪಿಲ್ಲ. ನಿಪಿ3 ರಲ್ಲಿ ಸಾಕ್ಷಿಯ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ಸಾಮಾನ್ಯವಾಗಿ ಸಾಕ್ಷಿದಾರರ ಸಹಿ ಪಡೆಯುವುದಿಲ್ಲ. ದಾವೆಯಲ್ಲಿ ಹೇಳಿರುವಂತೆ ಕಮಲಮ್ಮ ಅಥವಾ ಇತರೆ ಪ್ರತಿವಾದಿಗಳಿಗೆ ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ. ಕಮಲಮ್ಮನವರಿಂದ ಹಣ ವಸೂಲು ಮಾಡುವ ದುರುದ್ದೇಶದಿಂದ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ6 ರಿಂದ 9 ನ್ನು ಸಾಲದ ಭದ್ರತೆಗಾಗಿ ಪಡೆದಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ5 ರ ಬರವಣಿಗೆ ನಮ್ಮ ಕಛೇರಿಯ ಸಿಬ್ಬಂದಿ ದೇವರಾಜು ರವರದ್ದು ಇದೆ. ನಿಪಿ5 ರಲ್ಲಿ ನಮ್ಮ ಕಛೇರಿಯ ಇನ್ನೊಬ್ಬ ಸಿಬ್ಬಂದಿ ದೇವರಾಜು ಮತ್ತು ಕಮಲಮ್ಮನವರ ಕಡೆಯಿಂದ ಬಂದಿದ್ದ ರಮ್ಯ ರವರ ಸಹಿ ಇದೆ. ರಮ್ಯ ಇವರು ಕಮಲಮ್ಮನವರ ಕಡೆಯವರೆಂದು ಕಮಲಮ್ಮನವರ ಮಗ ಮೋಹನ್ ಹೇಳಿದರು. ಆ ದಾಖಲೆಗೆ ಸಹಿ ಮಾಡಿದ ನಂತರ ಆ ಬಗ್ಗೆ ಹೇಳಿದರು. ಆದರೆ ಯಾವ ದಿನಾಂಕ ಹೇಳಿದರು ಎಂದು ನೆನಪಿಲ್ಲ. ಆ ರಮ್ಯ ಇವರನ್ನು ನಾನು ನೋಡಿಲ್ಲ.

ನಿಪಿ5 ರಲ್ಲಿ ಅದರ ಬರವಣಿಗೆ ಮಾಡಿದ ದೇವರಾಜು ಸಹಿ ಮಾಡಿಲ್ಲ. ನಿಪಿ5 ರ ಬರವಣಿಯನ್ನು ನೋಡಿ ಅದು ದೇವರಾಜು ರವರದ್ದು ಎಂದು ಹೇಳುತ್ತಿದ್ದೇನೆ. ಆ ದೇವರಾಜುರವರು ದಾಖಲೆ ಬರಹಗಾರರಾಗಿ ಲೈಸೆನ್ಸ ಪಡೆದಿಲ್ಲ. ನಾನು ಮತ್ತು ದೇವರಾಜು ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿ ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಕಮಲಮ್ಮ ಇವರು ನಮ್ಮಿಂದ ಹಣ ಪಡೆಯದಿರುವುದರಿಂದ ಪ್ರತಿವಾದಿಯರು ದಾವೆಯಲ್ಲಿ ಕೇಳಿರುವ ಹಣ ಪಾವತಿಸಲು ಜವಬ್ದಾರರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು